O.S 335/2013

ಡಿ. ಡಬ್ಲೂ-1

ದಿನಾಂಕ:**11.02.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲು ವಾದಿ ಪರ ಶ್ರೀ ಎಂ.ಆರ್.ಎಲ್. ವಕೀಲರಿಂದ:**

ಈ ಹಿಂದೆ ದತ್ತು ತೆಗೆದುಕೊಂಡಿರುತ್ತಾರೆಂದು ಹೇಳಿದ್ದು, ಸದರಿ ಬಗ್ಗೆ ಯಾವುದೇ ಬರವಣಿಗೆ ಆಗಿರುವುದಿಲ್ಲ. ಮೃತ ತಿಮ್ಮಯ್ಯ ರವರು ಎಷ್ಟು ಜನರನ್ನು ದತ್ತು ತೆಗೆದುಕೊಂಡಿದ್ದಾರೆಂದರೆ ಸಾಕ್ಷಿ ಇಬ್ಬರು ಎಂದು ನುಡಿಯುತ್ತಾರೆ. ದತ್ತು ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಬರವಣಿಗೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ, ಮುಂದುವರೆದು ಮಕ್ಕಳಿಲ್ಲ ಎಂದು ತಾಯಿ ಕೊಡಿಸಿರುವುದು ಎಂದು ನುಡಿಯುತ್ತಾರೆ. ನಮ್ಮ ತಾಯಿ ದತ್ತು ಕೊಡಿಸಿರುವುದು ಎಂದು ಹೇಳಿದ್ದು ಸುಳ್ಳು ಎಂದರೆ ಸರಿಯಲ್ಲ. ದತ್ತು ಪಡೆದಂತಹ ಮಕ್ಕಳ ವಯಸ್ಸು ಎಷ್ಟು ಎಂದರೆ ಸಾಕ್ಷಿ ಮದುವೆಯಾಗಿ ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ಸದರಿಯವರು ಪ್ರಾಪ್ತ ವಯಸ್ಸಿಗೆ ಬಂದಿರುತ್ತಾರೆಂದರೆ ಸರಿ. ಸದರಿಯವರಿಗೆ ದಾವೆಯ ವಿಚಾರವನ್ನು ತಿಳಿಸಿರುತ್ತೇನೆ. ದತ್ತು ಮಕ್ಕಳು ನ್ಯಾಯಾಲಯದ ಮುಂದೆ ಬಂದು ಅರ್ಜಿ ಸಲ್ಲಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಸದರಿಯವರ ಶಾಲಾ ದಾಖಲಾತಿಗಳಲ್ಲಿ ಹಾಗೂ ಆಧಾರ ಕಾರ್ಡ್ ನಲ್ಲಿ ತಂದೆ ಹೆಸರು ಏನು ಇರುತ್ತದೆಂದರೆ ಸಾಕ್ಷಿ ತಿಮ್ಮಯ್ಯ ಎಂದು ನುಡಿಯುತ್ತಾರೆ. ಆಧಾರ ಕಾರ್ಡ್ ನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ ಎಂದರೆ ಸರಿ. ದತ್ತು ಎಂದು ಹೇಳಲಾದ ಮಕ್ಕಳ ಹೆಸರು ಮಧುರಾಮಣಿ ಮತ್ತು ಸತೀಶ. ಮಧುರಾಮಣಿ ಮದುವೆಯಾಗಿ ಗಂಡನ ಮನೆಯಲ್ಲಿ ಇದ್ದು, ಸತೀಶ ದತ್ತು ನೀಡಿದಂತಹ ತಂದೆಯ ಮನೆಯಲ್ಲಿಯೇ ವಾಸ ಇರುತ್ತಾರೆ, ಅಂದರೆ 4 ನೇ ಪ್ರತಿವಾದಿಯ ಮನೆಯಲ್ಲಿ. ಸತೀಶ ರವರನ್ನು ಯಾವುದೇ ದತ್ತು ಪಡೆದಿರುವುದಿಲ್ಲ, ಆದಕಾರಣ ಅವರ ಸ್ವಂತ ತಂದೆಯ ಮನೆಯಲ್ಲಿಯೇ ಇರುತ್ತಾರೆ ಎಂದರೆ ಸಾಕ್ಷಿ ದತ್ತು ತಂದೆ ಮರಣದ ನಂತರ ಅವರ ಸ್ವಂತ ತಂದೆಯ ಮನೆಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಮುಂದುವರೆದು ಎರಡೂ ಕಡೆಯೂ ಇರುತ್ತಾರೆ ಎಂದು ನುಡಿಯುತ್ತಾರೆ.

ಮೃತ 1 ನೇ ವಾದಿಯ ಹೆಂಡತಿ ಜವರಮ್ಮ ಬದುಕಿರುತ್ತಾರೆಂದರೆ ಸರಿ. ಒಂದು ವೇಳೆ ಸತೀಶ ದತ್ತು ಹೋಗಿದ್ದರೆ, ಜವರಮ್ಮ ರವರ ಜೊತೆಯಲ್ಲಿ ಇರಬೇಕಾಗಿತ್ತು ಎಂದರೆ ಸಾಕ್ಷಿ

ಎರಡೂ ಕಡೆ ಇರುತ್ತಾರೆ ಎಂದು ನುಡಿಯುತ್ತಾರೆ. ಒಂದು ವೇಳೆ ದತ್ತು ಪಡೆದಿದ್ದರೆ ಮೃತ ತಿಮ್ಮಯ್ಯ ರವರ ಮರಣದ ನಂತರ ಜವರಮ್ಮ ಅರ್ಜಿ ಹಾಕಿಕೊಂಡು ಬಂದಿದ್ದು, ಅವರೊಂದಿಗೆ ಈ ದಾವೆಯಲ್ಲಿ ಸೇರ್ಪಡೆಯಾಗಲು ದತ್ತು ಮಕ್ಕಳೆಂದು ಹೇಳುವವರು ಸಹ ಅರ್ಜಿ ಸಲ್ಲಿಸುತ್ತಿದ್ದರು ಎಂದರೆ ಸಾಕ್ಷಿ ಸದರಿ ಬಗ್ಗೆ ಅವರಿಗೆ ಬಿಟ್ಟಿದ್ದು ಎಂದು ನುಡಿಯುತ್ತಾರೆ. ವಾದಿ 1(ಎ) ಮೃತ ತಿಮ್ಮಯ್ಯ ರವರಿಗೆ ಅವರೊಬ್ಬರೇ ವಾರಸುದಾರರು ಎಂದು ಅರ್ಜಿ ಸಲ್ಲಿಸಿ ನ್ಯಾಯಾಲಯಕ್ಕೆ ಸೇರ್ಪಡೆಯಾಗಿರುತ್ತಾರೆಂದರೆ ಸುಳ್ಳು. ಸದರಿ ಅರ್ಜಿ ಸುಳ್ಳು ಎಂದು ಯಾವುದಾದರೂ ಪ್ರಾಧಿಕಾರದ ಮುಂದೆ ಪ್ರಶ್ನಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಜವರಮ್ಮ ಹಾಕಿರುವ ಅರ್ಜಿಗೆ ನಿಮ್ಮದೇನು ತಕರಾರು ಹಾಕಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಉತ್ತರಿಸಿರುವುದಿಲ್ಲ. ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಗೊಂದಲ ಸೃಷ್ಟಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸತೀಶ ಹಾಗೂ ಮಧುರಾಮಣಿ ಯಾವುದೇ ದತ್ತು ಹೋಗಿರುವುದಿಲ್ಲ, ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ವಾದಿಗಳು ಎಂದರೆ ತಿಮ್ಮಯ್ಯ, ಪ್ರತಿವಾದಿಗಳು ಎಂದರೆ ಕುಂತಯ್ಯ. 1, 2, 4, 5 ಮತ್ತು 7 ರಿಂದ 9 ನೇ ಪ್ರತಿವಾದಿಗಳು ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿದ್ದು, ಸದರಿಯವರು ಯಾರು ಎಂದು ಹೇಳುತ್ತೇನೆ. ಸದರಿಯವರ ಪರವಾಗಿಯೂ ಅವರುಗಳ ನಡುವೆ ಆಗುಹೋಗುಗಳ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಅವರುಗಳ ದಾಖಲಾತಿಗಳು ಮತ್ತು ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆಗೆ ಗೊತ್ತು ಎಂದು ನುಡಿಯುತ್ತಾರೆ. 9 ನೇ ಪ್ರತಿವಾದಿ ಯಾರು ಎಂದರೆ ಸಾಕ್ಷಿ ಹೆಣ್ಣು ಮಗಳು ಎಂದು ನುಡಿಯುತ್ತಾರೆ. ಮುಂದುವರೆದು ಸಾವಿತ್ರಮ್ಮ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸದರಿಯವರ ಪರವಾಗಿ ಈ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆಂದು ಹಾಕಿರುತ್ತೇನೆಂದರೆ ಸರಿ. ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವ ಕಾಲಕ್ಕೆ ತಿಮ್ಮಯ್ಯ ಮೃತಪಟ್ಟಿದ್ದರು ಎಂದರೆ ಸಾಕ್ಷಿ ಬದುಕಿದ್ದರು ಎಂದು ನುಡಿಯುತ್ತಾರೆ.

ಕುಟುಂಬದ ಎಲ್ಲ ಆಸ್ತಿಗಳನ್ನು ಸೇರಿಸಿಲ್ಲ ಎಂದು ಹೇಳಿದ್ದು, ಯಾವ ಆಸ್ತಿಗಳನ್ನು ಸೇರಿಸಿಲ್ಲ ಎಂದು ಹೇಳಲು ಆಗುವುದಿಲ್ಲ. ನನ್ನ ತಂದೆ ಇರುವವರೆಗೂ ಮನೆಯ

ಜವಾಬ್ದಾರಿಯನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು. ಕುಟುಂಬದ ಎಲ್ಲಾ ಆಸ್ತಿಗಳನ್ನು ಸೇರಿಸಿಲ್ಲ ಎಂದು ಹೇಳಿದ್ದು, ಸದರಿ ಬಗ್ಗೆ ದಾಖಲಾತಿ ನೀಡಿದ್ದೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತೋರಿಸಿ, ಇದನ್ನು ಯಾರು ಹೇಳಿ ಬರೆಸಿದ್ದು ಎಂದರೆ ಸಾಕ್ಷಿ ನನ್ನ ತಂದೆ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಮ್ಮ ತಂದೆ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಹೇಳಿ ಬರೆಸಿದ್ದರಿಂದ, ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ.

ದಾವಾ ಆಸ್ತಿ ಸ.ನಂ. ಹಾಗೂ ದಾಖಲಾತಿಗಳನ್ನು ನೋಡಿರುತ್ತೀರಾ ಎಂದರೆ ಸಾಕ್ಷಿ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಯಾರ ಹೆಸರಿನಲ್ಲಿವೆ ಎಂದು ಹೇಳಲಾಗುವುದಿಲ್ಲ, ಮುಂದುವರೆದು ಎಲ್ಲಾ ನನ್ನ ತಂದೆಯ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ದಾವಾ ಆಸ್ತಿ ಹಾಲಿ ನಮ್ಮ ತಂದೆಯ ಹೆಸರಿನಲ್ಲಿವೆ. ದಾವಾ ಆಸ್ತಿಗಳು ವಿಭಾಗ ಆಗಿವೆ ಎಂದು ತೋರಿಸಲು ಏನು ದಾಖಲಾತಿ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ, ಇವುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಅಜ್ಜನ ಆಸ್ತಿ 1 ಎಕರೆ ಇದ್ದು, ಉಳಿದ ಆಸ್ತಿಗಳು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದು ನುಡಿಯುತ್ತಾರೆ. 1 ಎಕರೆ ಆಸ್ತಿಯಲ್ಲಿ ಏನು ಬೆಳೆ ಬೆಳೆಯುತ್ತಿದ್ದರು ಎಂದರೆ ಸಾಕ್ಷಿ ರಾಗಿ ಎಂದು ನುಡಿಯುತ್ತಾರೆ. ಸದರಿ ಬೆಳೆ ನಿಮ್ಮ ಕುಟುಂಬಕ್ಕೆ ಸಾಲುತ್ತಿರಲಿಲ್ಲ ಎಂದರೆ ಸರಿ. ಆದಕಾರಣ ವಾದಿಗಳು ಜೀತಕ್ಕೆ ಇದ್ದು ಮನೆಗೆ ಹಣವನ್ನು ತಂದು ಕೊಡುತ್ತಿದ್ದರು ಎಂದರೆ ಸುಳ್ಳು. ಮೃತ 1 ನೇ ವಾದಿಗೆ ಬೆಳೆ ಬೆಳೆಯಲು, ಮನೆಯ ಖರ್ಚು ವೆಚ್ಚಗಳಿಗೆ ಸದರಿ 1 ಎಕರೆ ಬೆಳೆಯಿಂದ ಖರ್ಚು ಸಾಕಾಗುತ್ತಿರಲಿಲ್ಲ ಎಂದರೆ ಸರಿ.

ದಾವಾ ಆಸ್ತಿಗಳೆಲ್ಲಾ ಒಟ್ಟು ಕುಟುಂಬದ ಆಸ್ತಿಗಳಾಗಿದ್ದು, ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀನೆಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಯಾವುದು ಪಿತ್ರಾರ್ಜಿತ, ಯಾವುದು ಸ್ವಯಾರ್ಜಿತ ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಸರ್ಕಾರದವರು 2 ನೇ ವಾದಿಗೆ ಉಚಿತವಾಗಿ ನಿವೇಶನ ನೀಡಿರುತ್ತಾರೆಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿದ್ದು, ಸದರಿ ಉಚಿತವಾಗಿ ನಿವೇಶನವನ್ನು ನೀಡಿದ ದಾಖಲೆ ಎಂದು ಒಪ್ಪಿದ ಮೇರೆಗೆ ಅದನ್ನು ನಿಪಿ-**34** ಎಂದು ಗುರುತಿಸಲಾಯಿತು. ಸದರಿ ಬಗ್ಗೆ ಖಾತೆಯೂ ಸಹ ಆಗಿರುತ್ತದೆಂದರೆ ಸರಿ. ಸಾಕ್ಷಿಗೆ 2020-21 ಡಿಮಾಂಡ್ ರೆಜಿಸ್ಟರ್ ನ್ನು ತೋರಿಸಲಾಗಿ ಖಾತೆ ಆಗಿರುವ ರೆಜಿಸ್ಟರ್ ಎಂದು ಒಪ್ಪಿದ ಮೇರೆಗೆ, ಅದನ್ನು ನಿಪಿ-**35** ಎಂದು ಗುರುತಿಸಲಾಯಿತು. ಸರ್ಕಾರದವರು 3 ನೇ ಪ್ರತಿವಾದಿಗೆ ಉಚಿತವಾಗಿ ನಿವೇಶನ ನೀಡಿರುತ್ತಾರೆಂದರೆ ಸರಿ. ಸದರಿ ಆಸ್ತಿಯನ್ನು ಅವರ ಹೆಂಡತಿಯ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆಂದರೆ ಸರಿ. ಸರ್ಕಾರದವರು ಮೃತ 1 ನೇ ವಾದಿಗೆ ಉಚಿತವಾಗಿ ನಿವೇಶನ ನೀಡಿರುತ್ತಾರೆಂದರೆ ಸರಿ. ಸದರಿ ನಿವೇಶನಗಳೆಲ್ಲಾ ಅವರವರ ಸ್ವಯಾರ್ಜಿತ ಆಸ್ತಿ ಎಂದರೆ ಸಾಕ್ಷಿ ಮೃತ ತಿಮ್ಮಯ್ಯ ರವರು ಕಟ್ಟಿಸಿಕೊಂಡ ಮನೆ, ಒಟ್ಟಿಗೆ ಇರುವಾಗ ಕಟ್ಟಿಸಿದ್ದು ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಿಡಿ-1 ರಿಂದ 5 ಸರ್ಕಾರದಿಂದ ಉಚಿತವಾಗಿ ನೀಡಿದಂತಹ ನಿವೇಶನಗಳು ಎಂದರೆ ಸರಿ. ನಿಡಿ-2 ದಾಖಲಾತಿಯನ್ನು ಹಾಜರುಪಡಿಸಿದ್ದು, ವಿಭಾಗ ಆಗಿರುವ ಬಗ್ಗೆ ಯಾವುದಾದರೂ ದಾಖಲಾತಿ ಇದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ವಾದ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಆದಕಾರಣ ಈ ದಾವೆಯ ಸಂಪೂರ್ಣ ಮಾಹಿತಿ ನನಗೆ ಇಲ್ಲ ಎಂದರೆ ಸರಿ.

**(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶವನ್ನು ಕೋರಿದ್ದರಿಂದ ನೀಡಿಲಾಯಿತು).**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.